ರೈತ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿವಿ ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ವಿವಿಧ ಪ್ರಶಸ್ತಿಗೆ ರೈತರು, ರೈತ ಮಹಿಳೆ ಹಾಗೂ ವಿಸ್ತರಣಾ ಕಾರ್ಯಕರ್ತರಿಂದ ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯಮಟ್ಟದ ಪ್ರಶಸ್ತಿಗಳು (ರಾಜ್ಯ ವ್ಯಾಪ್ತಿ) ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ/ರೈತ ಮಹಿಳೆ ಪ್ರಶಸ್ತಿ, ಡಾ.ಎಂ.ಎಚ್. ಮರಿಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ. ರಾಜ್ಯ ಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 6 ಜಿಲ್ಲೆಗಳು) ಕ್ಯಾನ್ ಬ್ಯಾಂಕ್ ಅತ್ಯುತ್ತಮ ಕೃಷಿಕ ಪ್ರಶಸ್ತಿ, ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ, ಡಾ.ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ, ಜಿಲ್ಲಾ ಮಟ್ಟದ ಪ್ರಶಸ್ತಿಗಳು (ಕೃವಿವಿ, ಬೆಂಗಳೂರಿನ ಆಡಳಿತ ವ್ಯಾಪ್ತಿಯ 6 ಜಿಲ್ಲೆಗಳು)ಅರ್ಜಿ ನಮೂನೆಗಳು ಆಯಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕ ಕಚೇರಿ, ವಿಸ್ತರಣಾ ನಿರ್ದೇಶಕರ ಕಚೇರಿ, ಜಿಕೆವಿಕೆ, ಬೆಂಗಳೂರು, ಕೃಷಿ ವಿಜ್ಞಾನ ಕೇಂದ್ರಗಳು ಜೊತೆಗೆ ಬೆಂಗಳೂರು ಕೃಷಿ ವಿವಿ ವೆಬ್ ಸೈಟ್ www.uasbangalore.edu.inನಲ್ಲಿ ದೊರೆಯಲಿದೆ. ಭರ್ತಿ ಮಾಡಿದ ಅರ್ಜಿ ಜು.31ರೊಳಗೆ ಸಲ್ಲಿಸ ಬೇಕು. ಮಾಹಿತಿಗೆ ದೂ: 080-23330153 ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದೆ.

Udayavani pg 03

ಸ್ಟೇಟ್ ನ್ಯೂಸ್

ಮಾವು ಖರೀದಿಗೆ ರಾಜ್ಯದಿಂದ ₹101 ಕೋಟಿ ಬಿಡುಗಡೆ

ಬೆಂಗಳೂರು: ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಮಾವು ಖರೀದಿ ತೀರ್ಮಾನದಂತೆ ಬೆಲೆ ವ್ಯತ್ಯಾಸ ಪಾವತಿಗೆ 101 ಕೋಟಿ ರೂ. ಬಿಡುಗಡೆ ಮಾಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಆವರ್ತ ನಿಧಿಯಿಂದ ರಾಜ್ಯ ಮಾವು ಅಭಿವೃದ್ಧಿ ಮಾರುಕಟ್ಟೆ ನಿಗಮಕ್ಕೆ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಈಗಾಗಲೇ ಘೋಷಿಸಿರುವಂತೆ ಶೇ.50ರಷ್ಟು ಮೊತ್ತವನ್ನು ಕೇಂದ್ರ ಸರಕಾರದಿಂದ ಮರುಪಾವತಿ ಪಡೆಯಲು ಕ್ರಮ ವಹಿಸುವಂತೆ ಆದೇಶದಲ್ಲಿ ನಿರ್ದೇಶನ ನೀಡಲಾಗಿದೆ. ರಾಜ್ಯದಲ್ಲಿ ಮಾವು ಬೆಲೆ ಕುಸಿತದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದ ಹಿನ್ನೆಲೆಯಲ್ಲಿ ಮಾರುಕಟ್ಟೆ ಮಧ್ಯ ಪ್ರವೇಶಕ್ಕಾಗಿ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಕೇಂದ್ರ ಸರಕಾರದ ಗಮನ ಸೆಳೆದು, ಮನವಿ ಸಲ್ಲಿಸಿದ್ದರು. ಬೆಲೆ ವ್ಯತ್ಯಾಸ ಪಾವತಿಗೆ ಕೇಂದ್ರ ಕೃಷಿ ಸಚಿವರ ಸಮ್ಮತಿ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಬೆಲೆ ವ್ಯತ್ಯಾಸ ಪಾವತಿ ವ್ಯವಸ್ಥೆಯಡಿ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಶೇ.50:50ರ ಅನುಪಾತದಲ್ಲಿ ಯೋಜನೆ ಅನುಷ್ಠಾನಕ್ಕೆ ಕಳೆದ ವಾರ ಆದೇಶ ಹೊರಡಿಸಿದ್ದವು. ಅಂತೆಯೇ, ರಾಜ್ಯ ಸರಕಾರ ಈ ಉದ್ದೇಶಕ್ಕೆ 101 ಕೋಟಿ ರೂ. ಬಿಡುಗಡೆಗೆ ಆದೇಶ ಹೊರಡಿಸಿ ಪ್ರಕ್ರಿಯೆಗೆ ಚಾಲನೆ ನೀಡಿದೆ. 2.5 ಲಕ್ಷ ಟನ್ ಮಾವು ಖರೀದಿಗೆ ಕೇಂದ್ರ ಸರಕಾರ ಒಪ್ಪಿಗೆ ನೀಡಿದೆ.

V-karnataka pg 06



BKS welcomes NITI Aayog decision to withdraw paper

The Bharatiya Kisan Sangh – a farmers' body affiliated to the Rashtriya Swayamsevak Sangh (RSS) – welcomed the NITI Aayog's recent decision to withdraw a working paper suggesting that India should lower import tariffs on agricultural produce from the U.S., including on genetically modified soya and corn crops. BKS general secretary Mohini Mohan Mishra termed the paper anti-farmer and anti-consumer. "This paper was widely criticised by various farmers' organisations, including the BKS. After our strong reaction, the paper was removed from the NITI Aayog website," Mr. Mishra said. He pointed out that allowing GM products could put the livelihood of about 70 crore Indians in danger.

Dec Hrd pg 13

₹5,000 ಕುಸಿತ ಕಂಡ ಕೊಬ್ಬರಿ!

₹ 25,500 ಸರಾಸರಿ ವ್ಯಾಪಾರ | ಗರಿಷ್ಠದರ ₹28,000

■ ವಿಜಯವಾಣಿ ಸುದ್ದಿಜಾಲ ತುಮಕೂರು

ತಿಪಟೂರು ಕೊಬ್ಬರಿ ಮಾರುಕಟ್ಟೆಯಲ್ಲಿ ಉಂಡೆ ಕೊಬ್ಬರಿ ಬೆಲೆಯ ಇಳಿಕೆ ಆರಂಭವಾಗಿದೆ. ಸೋಮವಾರ 31306 ರೂ. ಗೆ ಹರಾಜಾಗುವ ಮೂಲಕ ದಾಖಲೆ ಬರೆದಿದ್ದ ಬೆಲೆ ಮೂರು ದಿನದಲ್ಲಿಯೇ ಬರೋಬ್ಬರಿ 5000 ರೂಪಾಯಿ ಇಳಿಕೆ ಕಾಣುವ ಮೂಲಕ ತೆಂಗು ಬೆಳೆಗಾರರಲ್ಲಿ ಗೊಂದಲ ಮೂಡಿಸಿದೆ.

ಗುರುವಾರ ತಿಪಟೂರು ಮಂಡಿಯಲ್ಲಿ ಕ್ವಿಂಟಾಲ್ ಕೊಬ್ಬರಿ ಗರಿಷ್ಠ 28000, ಕನಿಷ್ಠ 24000, ಮಾದರಿ 25500 ರೂ.ಗೆ ಹರಾಜಾಗಿದ್ದು, ಆವಕ 4463 ಕ್ವಿಂಟಾಲ್ ಬಂದಿದೆ. ಬೆಲೆ ಹೆಚ್ಚಾದ ಕೂಡಲೇ ರೈತರು ಒಮ್ಮೆಲೆ ಕೊಬ್ಬರಿ ಸುರಿದು ಮಾರುಕಟ್ಟೆಗೆ ತರಲಾರಂಭಿಸಿರುವುದು ಬೆಲೆ ಇಳಿಕೆಗೆ ಕಾರಣ ಎನ್ನಲಾಗುತ್ತಿದೆ.

ತಿಪಟೂರು ಮಂಡಿಯಲ್ಲಿ ಹಿಂದಿನಿಂದಲೂ ಈ ಬೆಲೆ ನಿರ್ಧಾರದಲ್ಲಿ ರವಾನೆದಾರರು ಆಡುವ ಮರ್ಮ ರೈತರಿಗೆ ತಿಳಿಯುತ್ತಲೇ ಇಲ್ಲ, ಈಗ ಇ-ಟೆಂಡರ್ ಜಾರಿಗೊಳಿಸಲಾಗಿದ್ದರೂ ಬೆಲೆ ಏರಿಳಿತದ ಹಿಂದೆ ವರ್ತಕರ ಮಾಸ್ಟರ್ ಗೇಮ್ ಇದೆ ಎನ್ನಲಾಗುತ್ತಿದೆ. ವರ್ತಕರ ಬಳಿ ಇಟ್ಟುಕೊಂಡಿದ್ದ ಕೊಬ್ಬರಿ ಮಾರಾಟಕ್ಕಷ್ಟೇ ಬೆಲೆ ಹೆಚ್ಚಳ ಮಾಡಿಕೊಳ್ಳಲಾಗಿತ್ತು, ಮತ್ತೆ ಯಥಾಸ್ಥಿತಿಗೆ ಬೆಲೆ ತಲುಪಲಿದೆ ಎಂಬ ಮಾತೂ ಇದೆ.



ತಿಪಟೂರು ಕೊಬ್ಬರಿ ಧಾರಣೆ	
₹24,000	ಕನಿಷ್ಠ
₹28,000	ಗರಿಷ್ಠ
₹25,500	ಮಾದರಿ
4,463 ಕ್ವಿಂಟಾಲ್	ಆವಕ

ತಿಪಟೂರು ಎಪಿಎಂಸಿಯಲ್ಲಿ ಪ್ರತಿ ಸೋಮವಾರ ಹಾಗೂ ಗುರುವಾರ ಟೆಂಡರ್ ನಡೆಯುತ್ತಿದ್ದ ಮುಂದಿನ ಸೋಮವಾರದ ಹರಾಜಿನಲ್ಲಿ ಕೊಬ್ಬರಿ ದರದ ಹಣೆಬರಹ ನಿಖರವಾಗಲಿದೆ. ಬೆಲೆ ಇಳಿಕೆ ಮುಂದುವರಿದರೆ ಹಿಂದಿನಂತೆಯೇ ಕೊಬ್ಬರಿ ಉತ್ಪಾದಕರು ನಷ್ಟದಲ್ಲಿ ಮಾರಾಟ ಮಾಡುವ ಸನ್ನಿವೇಶ ಸೃಷ್ಟಿಯಾಗಲಿದೆ.

ಒಂದು ವಾರ ಬೆಲೆ ಹೆಚ್ಚಳವಾಗಿದ್ದಕ್ಕೆ ಕೊಬ್ಬರಿ ಬೆಲೆಯನ್ನು ಚಿನ್ನಕ್ಕೆ ಹೋಲಿಸಿ ವ್ಯಾಖ್ಯಾನಗಳು ಬಂದಿದ್ದು, ಕೊಬ್ಬರಿ ಬೆಲೆ ಇಳಿಯಲಾರಂಭಿಸಿದೆ. ಆದರೆ, 31 ಸಾವಿರ ರೂಪಾಯಿಗೆ ಕೊಬ್ಬರಿ ಮಾರಾಟ ವಾಗಿರುವುದು ಮಾತ್ರ ಐತಿಹಾಸಿಕ ಎನ್ನಿಸಿಕೊಂಡಿದೆ.

Vijayavani pg 5B

For more information visit
University Library Website
Web - uasbagrilibindia.org
E-mail- librarian@uasbangalore.edu.in

ಕನ್ನಡಪ್ರಭ ರೈತರತ್ನನ ಹೊಲದಲ್ಲಿ ಚಲುವ ಬಿತ್ತನೆ

ಪಂಚೆ- ಜುಬ್ಬಾ ಧರಿಸಿ ನೇಗಿಲು ಹಿಡಿದ ಸಚಿವ | ಚಾಮರಾಜನಗರ ಜಿಲ್ಲೆ ಹನೂರಿನಲ್ಲಿ ರಾಗಿ ಬಿತ್ತನೆ

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ಜಿಲ್ಲೆಯ ಹನೂರು ತಾಲೂಕಿನ ರೈತ, 'ಕನ್ನಡಪ್ರಭ' ರೈತರತ್ನ ಪ್ರಶಸ್ತಿ ಪುರಸ್ಕೃತ ಪಿ.ದಯಾನಂದ ಅವರ ಹೊಲದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿಯವರು ಗುರುವಾರ ರಾಗಿ ಬಿತ್ತನೆ ಮಾಡುವ ಮೂಲಕ ಈ ಬಾರಿ ಕೃಷಿ ಚಟುವಟಿಕೆಗಳಿಗೆ ಚಾಲನೆ ನೀಡಿದರು.

ಪಂಚೆ-ಜುಬ್ಬಾ ಧರಿಸಿ ಬಂದಿದ್ದ ಸಚಿವರಿಗೆ ಹಸಿರು ಶಾಲು ಹೊದಿಸಿ ಕೃಷಿ ಇಲಾಖೆಯ ಅಧಿಕಾರಿಗಳು ಸ್ವಾಗತ ಕೋರಿದರು. ಬಳಿಕ, ಸಚಿವರು ಎತ್ತುಗಳಿಗೆ ನಮಸ್ಕರಿಸಿ, ನೇಗಿಲು ಹಿಡಿದು ರಾಗಿ ಬಿತ್ತಿದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹಾಗೂ ಶಾಸಕ ಎಂ.ಆರ್. ಮಂಜುನಾಥ್ ಸಚಿವರಿಗೆ ಸಾಥ್ ನೀಡಿದರು. ಬೀಜ ಬಿತ್ತನೆ ಬಳಿಕ ರೈತ ಫಲಾನುಭವಿಗಳಿಗೆ ಕೃಷಿ ಯಂತ್ರೋಪಕರ ಣಗಳನ್ನು ಸಚಿವರು ವಿತರಿಸಿದರು. ಎಂಆರ್1 ರಾಗಿ ಬಿತ್ತನೆ ಮಾಡಿದ ನಂತರ, ನ್ಯಾನೋ ಯೂರಿಯಾವನ್ನು ಡ್ರೋಣ್ ಮೂಲಕ ಮುಸುಕಿನ ಜೋಳದ ಬೆಳೆಗೆ ಸಿಂಪಡಣೆ ಮಾಡಿದರು.

ಕೃಷಿ ಇಲಾಖೆ ಮೂಲಕ ಪಿ.ದಯಾನಂದರ ಸುಸ್ಥಿರ ಕೃಷಿ ಬಗ್ಗೆ ಸಾಕ್ಷ್ಯಚಿತ್ರ ಮಾಡಿಸಿದ ಸಚಿವರು, ಸುಸ್ಥಿರ ಕೃಷಿ ಬಗ್ಗೆಸ್ವತಃಸಚಿವರೇಸಂದರ್ಶನಮಾಡಿದರು.ಸಂದರ್ಶನದ ನಂತರ ದಯಾನಂದ ಅವರು ಬೆಳೆದಿರುವ ಹತ್ತಾರು ಬೆಳೆ ಮಾದರಿ, ನೂರಾರು ಬಗೆ ಬಗೆಯ ಹಣ್ಣಿನ ಗಿಡಗಳು, ಸಾವಿರಾರು ಜಾತಿ ಸಸ್ಯಗಳು, ಬರಗೂರ್, ಹಳ್ಳಿಕಾರ್‌ತಳಿ ಹಸುಗಳು, ಕುರಿ ಕೋಳಿ, ಮೇಕೆ ಹಾಗೂ ಕತ್ತೆಗಳು, ಅಡುಗೆ



ಚಾಮರಾಜನಗರದ ಚಿಂಚಳ್ಳಿಯ ಕೃಷಿಕ ದಯಾನಂದ ಅವರ ಜಮೀನಿನಲ್ಲಿ ಸಚಿವ ಚಲುವರಾಯಸ್ವಾಮಿ ರಾಗಿ ಬಿತ್ತನೆ.

ಎಣ್ಣೆ ಘಟಕ, ಸುಗಂಧ ತಯಾರಿಕಾ ಘಟಕ, ರೇಷ್ಮೆಘಟಕ, ವಿವಿಧ ಬಗೆ ಪರಿಕರಗಳ ಜೊತೆಗೆ ಎತ್ತಿನಗಾಡಿ, ಕುದುರೆ ಗಾಡಿ, ವಿವಿಧ ಮಾದರಿ ಸ್ಕೂಟರ್ ಮತ್ತು ಕಾರುಗಳನ್ನು ವೀಕ್ಷಣೆ ಮಾಡಿದರು.

ಈ ವೇಳೆ ಮಾತನಾಡಿ, ವ್ಯವಸಾಯ ಕಷ್ಟಪಟ್ಟು ಮಾಡುವ ದುಡಿಮೆಯಾಗಿದ್ದು ರೈತರು ನಿತ್ಯ ಜಮೀನಿಗೆ ಹೋಗ ಬೇಕು. ಆಗೊಮ್ಮೆ- ಈಗೊಮ್ಮೆ ಜಮೀನಿಗೆ ಹೋದರೆ ಯಾವುದೇ ಆದಾಯ ಬರಲು ಸಾಧ್ಯವಿಲ್ಲ. ಒಂದೆಕರೆ, ಎರಡೆಕೆರೆ ಜಮೀನಿದ್ದವರೂ ಲಕ್ಷಗಟ್ಟಲೆ ಆದಾಯ ಕಾಣಬಹುದು. ನೀರನ್ನು ಮಿತವಾಗಿ ಬಳಕೆಮಾಡಿಕೊಳ್ಳುವ ಪದ್ಧತಿಯನ್ನು ರೈತರು ಅನುಸರಿಸಬೇಕು. ಆಧುನಿಕ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಗತಿಪರ ರೈತ ದಯಾನಂದ: ಪಟ್ಟಣದಿಂದ 6 ಕಿ.ಮೀ ದೂರದಲ್ಲಿರುವ ಚಿಂಚಳ್ಳಿ ಗ್ರಾಮದ ಬಳಿ, ಮಹದೇಶ್ವರ ಬೆಟ್ಟದ ನಿಸರ್ಗದ ಮಡಿಲಿನಲ್ಲಿ ಹತ್ತಾರು ಎಕರೆ ಕೃಷಿ ಭೂಮಿಯಲ್ಲಿ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಮೀನುಗಾರಿಕೆ, ಜೇನು, ರೇಷ್ಮೆ, ಪುಷ್ಪ ಹಾಗೂ ಅರಣ್ಯ ಕೃಷಿ ಮಾಡಿ ಜಮೀನನ್ನು ಕೃಷಿ ಪ್ರವಾಸೋದ್ಯಮ ಕ್ಷೇತ್ರವನ್ನಾಗಿಸಿದ್ದಾರೆ ಪ್ರಗತಿಪರ ರೈತ ದಯಾನಂದ. ಇವರ ಸುಸ್ಥಿರ ಕೃಷಿ ಸಾಧನೆ ಗುರುತಿಸಿ ಕನ್ನಡಪ್ರಭ ರೈತ ಪ್ರಶಸ್ತಿಯನ್ನು ಪ್ರಕಟಿಸಿತ್ತು. ಧರ್ಮಸ್ಥಳದಲ್ಲಿ ಚಲುವರಾಯಸ್ವಾಮಿ ಅವರೇ ಪಿ.ದಯಾನಂದ ಅವರಿಗೆ ರೈತರತ್ನ ಪ್ರಶಸ್ತಿ ನೀಡಿದ್ದರು.

Kannadaprabha Pg 07

Hindu Pg 12

WILD WATCH


Rare white-eared night heron seen in Arunachal

SUMIR KARMAKAR
GUWAHATI, DHNS

The elusive and endangered white-eared night heron has been camera-trapped in Namdapha National Park and Tiger Reserve in Arunachal Pradesh.

The latest sighting was captured by cameras recently installed by forest staff at Namdapha. This was the rare bird's only second recorded sighting in India, the first being at Valmiki Tiger Reserve in Bihar in November 2016.

"The white-eared night heron is a secretive, nocturnal species and extremely difficult to observe in the wild. Its presence in Namdapha underscores the park's extraordinary ecological value and role as a critical refuge for rare, lesser-known, and globally threatened species," said the park's Conservator of Forests and Field Director AK Deka on Wednesday.



© Namdapha National Park & Tiger Reserve

The bird was camera-trapped in the Namdapha National Park and Tiger Reserve.

He added that the white-eared night heron, with an estimated population of fewer than 1,000, was primarily found in southern China and northern Vietnam.

Namdapha National Park and Tiger Reserve, located in the Eastern Himalayas, is one of the most biodiverse protected areas in India. Known for its unique blend of tropical and temperate ecosystems, it supports a high level of species richness, including several endemic and endangered flora and fauna.

"Namdapha is not only a haven for the recently sighted white-eared night heron, but also shelters some of the world's most threatened wildlife. It is the only park in India that harbours a rich continuum of habitat types from tropical rainforests to alpine meadows, allowing for extraordinary species diversity," Deka said.

The park is home to critically endangered species such as the Namdapha flying squirrel, white-bellied heron and Chinese pangolin, along with many other rare and endemic species.

"This observation adds to the growing recognition of Namdapha's conservation significance and highlights the urgent need to strengthen protection measures, research and monitoring of such sensitive habitats," he said.